ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ದಿನಾಂಕ : DATE : 17/1/21

# ಸ್ಟಾರ್ಟ್ ಅಪ್‌ಗೆ 1000 ಕೋಟಿ ರೂ

ನವದೆಹಲಿ: ದೇಶದ ಸ್ಟಾರ್ಟಪ್‌ಗಳಿಗೆ ಉತ್ತೇಜನ ನೀಡಲು ಮತ್ತು ಉದಯೋನ್ಮುಖ ಉದ್ಯಮಿಗಳ ಹೊಸ ಪರಿಕಲ್ಪನೆಗಳ ಸಾಕಾರಕ್ಕೆ ಅನುವು ಮಾಡಿಕೊಡಲು ಸಾವಿರ ಕೋಟಿ ರೂ.ಗಳ 'ಸ್ಟಾರ್ಟಪ್ ಇಂಡಿಯಾ ಮೂಲ ಧನ'ವನ್ನು ಪ್ರಧಾನಿ ಮೋದಿ ಶನಿವಾರ ಘೋಷಿಸಿದ್ದಾರೆ.

'ಪ್ರಾರಂಭ: ಸ್ಟಾರ್ಟಪ್ ಇಂಡಿಯಾ ಅಂತಾರಾಷ್ಟ್ರೀಯ ಶೃಂಗ'ವನ್ನು ಉದ್ದೇಶಿಸಿ ಮಾತನಾಡಿದ ಅವರು, ನವೋದ್ಯಮಗಳ ಪ್ರಗತಿಯಿಂದ ಸಾಕಷ್ಟು ಉದ್ಯೋಗ ಸೃಷ್ಟಿ ಮತ್ತು ಜನರ ಜೀವನಮಟ್ಟ



ಸುಧಾರಣೆಯಾಗುತ್ತದೆ. ಹೀಗಾಗಿ; ಇಂಥ ನವೋದ್ಯಮಗಳಿಗೆ ಆರಂಭಿಕ ಬಂಡವಾಳ ಒದಗಿಸುವ ಉದ್ದೇಶದಿಂದ 1,000 ಕೋಟಿ ರೂ.ಗಳ ಮೂಲನಿಧಿಯನ್ನುಆರಂಭಿಸುತ್ತಿದ್ದೇವೆ ಎಂದು ಹೇಳಿದ್ದಾರೆ. 2014ರಲ್ಲಿ ದೇಶದಲ್ಲಿ ಕೇವಲ 4 ಸ್ಟಾರ್ಟಪ್‌ಗಳು ಯೂನಿಕಾರ್ನ್ ಕ್ಲಬ್‌ನಲ್ಲಿ ಇದ್ದವು. ಆದರೆ, ಈಗ ಅವುಗಳ ಸಂಖ್ಯೆ 30 ದಾಟಿದೆ ಎಂದೂ ಮೋದಿ ಹೇಳಿದ್ದಾರೆ. ಅದರಲ್ಲೂ 2020ರಲ್ಲೇ 11 ಸ್ಟಾರ್ಟಪ್‌ಗಳು ಯೂನಿಕಾರ್ನ್ ಕ್ಲಬ್‌ಗೆ ಸೇರ್ಪಡೆಯಾಗಿವೆ ಎಂದು ಅವರು ಶ್ಲಾಘಿಸಿದ್ದಾರೆ.

2016ರಲ್ಲಿ ಸ್ಟಾರ್ಟಪ್ ಇಂಡಿಯಾವನ್ನು ಆರಂಭಿಸಲಾಗಿದ್ದು, ಸದ್ಯ ಇದಕ್ಕೆ ಐದು ವರ್ಷ ತುಂಬಿದೆ.